ಓಎಸ್ ನಂಬ್ರ:214-10

ಪಿ.ಡಬ್ಲ್ಯೂ:1

ದಿನಾಂಕ: 16-10-2017 ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣೀಕರಿಸಲಾಯಿತು.
ಪಾಟೀ ಸವಾಲು: ಪ್ರತಿವಾದಿಗಳ ಪರವಾಗಿ ಶ್ರಿ ಪಿ.ಕೆ. ವಕೀಲರಿಂದ

ನನ್ನ ಸಾಕ್ಷಿ ಪ್ರಮಾಣಪತ್ರವನ್ನು ವಾದಿಯ ವಕೀಲರ ಕಚೇರಿಯಲ್ಲಿ ತಯಾರಿಸಿದ್ದು ಅದನ್ನು ತಯಾರಿಸಲು ಸುಮಾರು ಅರ್ಧ ಗಂಟೆ ಬೇಕಾಯಿತು. ನನ್ನ ಪ್ರಮಾಣಪತ್ರವನ್ನು ನಾನು ಹೋದ ನಂತರ ಬೆರಳಚ್ಚು ಮಾಡಿಸಿದ್ದುರು. ಆ ಪ್ರಕಾರ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಬೇಕೆಂದು ವಕೀಲರು ಹೇಳಿರುತ್ತಾರೆ ಎಂದರೆ ಸರಿ. ತೆಕ್ಕಟ್ಟೆಯ ರಾಘವೇಂದ್ರ ಸ್ವಾಮಿ ಮಠದಿಂದ ಪ್ರಮಾಣಪತ್ರದಲ್ಲಿ ಹೇಳಿದ ಹಾಲುಗುಡ್ಡೆಗೆ ಸುಮಾರು ಎರಡು ಕಿ.ಮಿ. ಆಗುತ್ತದೆ. ನಮ್ಮ ಮನೆಯೂ ಹಾಲುಗುಡ್ಡೆಯ ಪೇಟೆಯಿಂದ ಸುಮಾರು ಅರ್ಧ ಕಿ.ಮಿ. ದೂರ ಇದೆ. ನಮ್ಮ ಮನೆಯ ಹತ್ತಿರ ವಾಸ್ತವ್ಯದ ಮನೆಗಳು ಇವೆ. ಈ ದಿನ ನನ್ನ ಜೊತೆ ವಾದಿಯವರು ಬಂದಿದ್ದಾರೆ ನ್ಯಾಯಾಲಯದಲ್ಲಿ ಇದ್ದಾರೆ ಎಂದರೆ ಅವರು ನನಗೆ ಈ ದಿನ ಸಿಕ್ಕಿಲ್ಲ. ನನಗೆ ವೆಂಕಟರಮಣ ಹತ್ವಾರ್ ರವರ ಹೆಂಡತಿ ಸಾವಿತ್ರಮ್ಮ ನವರ ಪರಿಚಯ ಇದೆ. ಸದ್ರಿ ಸಾವಿತ್ರಮ್ಮ ರವರ ಸಹಿಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಗೆ ದಿನಾಂಕ:20-5-1999 ರ ಮೃತ್ಯುಪತ್ರದ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯೂ ಸದ್ರಿ ದಾಖಲೆಯಲ್ಲಿ ಸಾವಿತ್ರಮ್ಮ ರವರ ಸಹಿ ಇದೆ ಎಂದು ಗುರುತಿಸಿದರೂ ಸದ್ರಿ ಮೃತ್ಯುಪತ್ರವು ಪ್ರತಿಯಾದ ಕಾರಣ ಅದನ್ನು ನಿಶಾನೆಗೊಳಿಸಿರುವುದಿಲ್ಲಾ.

(ಈ ಹಂತದಲ್ಲಿ ವಕೀಲರು ಮೂಲ ದಾಖಲೆಯನ್ನು ಹಾಜರುಪಡಿಸಿ ಪಾಟೀ ಸವಾಲನ್ನು ಮುಂದುವರೆಸಲು ಕಾಲಾವಕಾಶ ಕೋರಿದ್ದರಿಂದ, ಅನುಮತಿ ನೀಡಲಾಗಿದೆ.)

ಓ.ಹೇ.ಕೇ.ಸರಿ ಇದೆ                ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಕುಂದಾಪುರ